# ಕಾರ್ಮಿಕರ ಹಿತರಕ್ಷಕ ಡಾ. ಬಾಬಾಸಾಹೇಬ್ ಅಂಬೇಡ್ಕರ್

**ಶ್ರೀಧರ್ ಆರ್.**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ, ರಾಮನಗರ.

DOI: https://doi.org/10.5281/zenodo.15504669

## ABSTRACT:

ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ಹಾಗೂ ರಾಜಕೀಯ ಕೊಡುಗೆ ಅಪಾರ. ಬಹುಜನರ ಬವಣೆಯ ಬದುಕಿನೊಳಗೆ ಇಳಿದು ಲವಣದಂತೆ ಕರಗಿರುವ ಬಾಬಾಸಾಹೇಬರು ಅಪ್ಪಟ ಪ್ರಜಾಪ್ರಭುತ್ವವಾದಿ. ರೈತರು, ಕಾರ್ಮಿಕರು, ಹೆಣ್ಣು ಮಕ್ಕಳ ಉನ್ನತಿಗೆ ಹಾಗೂ ಸಕಲ ಜೀವಿಗಳ ಘನತೆಗೆ ಅಗತ್ಯವಾದ ಮಾರ್ಗಗಳನ್ನು ಶೋಧಿಸಿದ ಶ್ರೇಷ್ಠ ವಿಮೋಚಕ. ಭಾರತದಲ್ಲಿ ಕಾರ್ಮಿಕರಿಗೆ ಯಾವುದೇ ಹಕ್ಕುಗಳು ದೊರೆತಿದ್ದರೆ, ಕಾರ್ಮಿಕರು ಅದರ ಫಲಾನುಭವಿಗಳು ಆಗಿದ್ದರೆ ಅದರ ಸಂಪೂರ್ಣ ಯಶಸ್ಸು ಬಾಬಾಸಾಹೇಬರಿಗೆ ಸಲ್ಲಬೇಕು. ಪ್ರಸ್ತುತ ಲೇಖನದಲ್ಲಿ ಜನಪರವಾದ ಅಭಿವೃದ್ಧಿ ಯೋಜನೆಗಳು ಮತ್ತು ಕಾರ್ಮಿಕರ ಕಲ್ಯಾಣಕ್ಕಾಗಿ ಅವಿರತವಾಗಿ ಶ್ರಮಿಸಿದ ಬಾಬಾಸಾಹೇಬರ ಪಾತ್ರವನ್ನು ಅಭಿವ್ಯಕ್ತಿಸುವ ಪ್ರಯತ್ನ ಮಾಡಲಾಗಿದೆ.

## KEYWORDS:

ಡಾ. ಬಿ.ಆರ್. ಅಂಬೇಡ್ಕರ್, ಇಂಡಿಪೆಂಡೆಂಟ್ ಲೇಬರ್ ಪಾರ್ಟಿ, ವೈಸರಾಯ್ ಕೌನ್ಸಿಲ್, ಕಾರ್ಮಿಕ ಮಂತ್ರಿ.

“ಭಾರತೀಯ ಸಮಾಜದ ದಿಕ್ಕೆಟ್ಟ ದೋಣಿಯನ್ನು ಸಮಾನತೆಯ ತತ್ವ, ಸಾಮಾಜಿಕ ಏಳಿಗೆ, ಸ್ಥಿರ ಪ್ರಜಾಪ್ರಭುತ್ವ ಎಂಬ ದಂಡೆಗೆ ಮುಟ್ಟಿಸಲು ದೃಢ ಮನಸ್ಸಿನಿಂದ ಹುಟ್ಟುಹಾಕುತ್ತಾ ಕುಳಿತಿರುವ ನಾವಿಕನಂತೆ ಡಾ. ಬಿ.ಆರ್. ಅಂಬೇಡ್ಕರ್ ಭಾಸವಾಗುವುದಿದೆ.”

**–ಸೂರಜ್ ಯಂಗ್ಡೆ**

ಮೇ 01, ಕಾರ್ಮಿಕ ದಿನವನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಇದು ಚಾರಿತ್ರಿಕವಾಗಿ ಮಹತ್ವ ಪಡೆದಿರುವ ಕಾರ್ಮಿಕ ವರ್ಗದ ಹಬ್ಬವಾಗಿದ್ದು, ಅಂತರರಾಷ್ಟ್ರೀಯ ಕಾರ್ಮಿಕ ಚಳವಳಿಗಳು ಇದನ್ನು ಪ್ರೋತ್ಸಾಹಿಸುತ್ತವೆ. ಭಾರತದಲ್ಲಿ ಕಾರ್ಮಿಕರಿಗೆ ಯಾವುದೇ ಹಕ್ಕುಗಳು ದೊರೆತಿದ್ದರೆ, ಕಾರ್ಮಿಕರು ಅದರ ಫಲಾನುಭವಿಗಳು ಆಗಿದ್ದರೆ ಅದರ ಸಂಪೂರ್ಣ ಯಶಸ್ಸು ಬಾಬಾಸಾಹೇಬರಿಗೆ ಸಲ್ಲಬೇಕು. ಡಾ. ಅಂಬೇಡ್ಕರ್ ಅವರು ಆಗಸ್ಟ್ 15, 1936 ರಲ್ಲಿ ಸ್ಥಾಪಿಸಿದ ಪಕ್ಷದ ಹೆಸರು– ಸ್ವತಂತ್ರ ಕಾರ್ಮಿಕ ಪಕ್ಷ (‘ಇಂಡಿಪೆಂಡೆಂಟ್ ಲೇಬರ್ ಪಾರ್ಟಿ’) 1937

ರಲ್ಲಿ ನಡೆದ ಮುಂಬೈ ಪ್ರಾಂತ್ಯದ ಚುನಾವಣೆಯಲ್ಲಿ ಈ ಪಕ್ಷದ ವತಿಯಿಂದ ಅಂಬೇಡ್ಕರ್ ಅವರನ್ನು ಒಳಗೊಂಡಂತೆ ಸ್ಪರ್ಧಿಸಿದ್ದ 17 ಅಭ್ಯರ್ಥಿಗಳಲ್ಲಿ 14 ಅಭ್ಯರ್ಥಿಗಳು ಜನಮನ್ನಣೆ ಪಡೆದು ಜಯಶಾಲಿಯಾಗಿದ್ದರು.

ಡಾ. ಅಂಬೇಡ್ಕರ್ ಅವರ ಸಾಮಾಜಿಕ ಹಾಗೂ ರಾಜಕೀಯ ಕೊಡುಗೆ ಅಪಾರ. ಆದರೆ, ಬಹುತೇಕರೂ ಡಾ. ಅಂಬೇಡ್ಕರ್ ಅವರ ಕಾರ್ಮಿಕರ ಏಳಿಗೆಗಾಗಿ ಶ್ರಮಿಸಿದ ನಾಯಕನ ಪಾತ್ರವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಅಂದಿನ ವೈಸ್ ರಾಯ್ ಕೌನ್ಸಿಲ್ ಆಡಳಿತದಲ್ಲಿ ಡಾ. ಅಂಬೇಡ್ಕರ್ ಅವರು ಜುಲೈ 20, 1942 ರಲ್ಲಿ ಕಾರ್ಮಿಕ ಖಾತೆ ಸಚಿವರಾದರು. ನೀರಾವರಿ ಮತ್ತು ವಿದ್ಯುತ್ ಶಕ್ತಿಯ ಅಭಿವೃದ್ಧಿಗೆ ನೀತಿ ರಚನೆ ಮತ್ತು ಅಗತ್ಯವಾದ ಯೋಜನೆ ರೂಪಿಸುವುದು ಅದರ ಪ್ರಮುಖ ಕರ್ತವ್ಯವಾಗಿತ್ತು. ಡಾ. ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ಕಾರ್ಮಿಕ ಇಲಾಖೆಯು ವಿದ್ಯುತ್ ವ್ಯವಸ್ಥೆಯ ಅಭಿವೃದ್ಧಿಗೆ 'ಕೇಂದ್ರ ತಾಂತ್ರಿಕ ವಿದ್ಯುತ್ ಮಂಡಳಿ' (C.T.P.B.) ಸ್ಥಾಪಿಸಲು ನಿರ್ಧರಿಸಿತು. ಇದು ಜಲವಿದ್ಯುತ್ ಕೇಂದ್ರಗಳ ಸ್ಥಳಗಳು, ಜಲವಿದ್ಯುತ್ ಘಟಕಗಳ ಸಮೀಕ್ಷೆ, ವಿದ್ಯುತ್ ಉತ್ಪಾದನೆಯ ಸಮಸ್ಯೆಗಳ ವಿಶ್ಲೇಷಣೆ ಮತ್ತು ಉಷ್ಣ ವಿದ್ಯುತ್ ಕೇಂದ್ರಗಳ ಸ್ಥಾಪನೆಗೆ ನೆರವಾಯಿತು.

ಭಾರತದ ಕಾರ್ಮಿಕರ ಹಕ್ಕುಗಳನ್ನು ಯಾರಾದರೂ ಒಬ್ಬ ನಾಯಕ ರಕ್ಷಿಸಿದ್ದರೆ, ಅದು ಬಾಬಾಸಾಹೇಬ್ ಅಂಬೇಡ್ಕರ್ ಅವರೇ. ಡಾ. ಅಂಬೇಡ್ಕರ್ ಇಲ್ಲದಿದ್ದರೆ, ಇಂದು ಭಾರತದ ಕಾರ್ಮಿಕರ ಭವಿಷ್ಯ ಕತ್ತಲೆಯಾಗಿರುತ್ತಿತ್ತು. ಅವರು ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿ ಕಾರ್ಮಿಕ ವರ್ಗದ ಪರಮ ಶತ್ರುಗಳು ಎನ್ನುವ ಭಾರತದ ಕಟು ವಾಸ್ತವವನ್ನು ಅರಿತಿದ್ದ ಮಹಾನ್ ದೂರದರ್ಶಿ ನಾಯಕ. ಡಾ. ಅಂಬೇಡ್ಕರ್ ಅವರ ಸುಸ್ಥಿರ ಆರ್ಥಿಕ ನೀತಿಗಳು ಭಾರತವನ್ನು ಆರ್ಥಿಕ ಮುಗ್ಗಟ್ಟಿನ ಸಮಯದಲ್ಲೂ ರಕ್ಷಿಸಿವೆ. ಆರ್.ಬಿ.ಐ. ಸ್ಥಾಪನಾ ಮಾರ್ಗಸೂಚಿಗಳು ಅಥವಾ ಆರ್ಥಿಕತೆಯ ಇತರ ನಿಯಮಗಳನ್ನು ಡಾ. ಅಂಬೇಡ್ಕರ್ ಅವರ ಮುನ್ನೋಟದ ಫಲ ಎಂದರೆ ತಪ್ಪಾಗಲಾರದು.

ಭಾರತದಲ್ಲಿ 12 ಗಂಟೆಗಳ ಕೆಲಸದ ಅವಧಿಯನ್ನು 08 ಗಂಟೆಗಳಿಗೆ ನಿಗದಿಗೊಳಿಸಬೇಕು ಎಂದು ಶಿಫಾರಸ್ಸು ಮಾಡಿದವರು ಡಾ. ಅಂಬೇಡ್ಕರ್. ಈ ನೀತಿಯನ್ನು ನವೆಂಬರ್ 27, 1942 ರಲ್ಲಿ ನವದೆಹಲಿಯಲ್ಲಿ ನಡೆದ 07ನೇ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಘೋಷಿಸಲಾಯಿತು. ಎಲ್ಲಾ ಕಾರ್ಮಿಕರು ಡಾ. ಅಂಬೇಡ್ಕರ್ ಅವರಿಗೆ ಕೃತಜ್ಞರಾಗಿರಬೇಕು, ವಿಶೇಷವಾಗಿ ಮಹಿಳಾ ಉದ್ಯೋಗಿಗಳು. ಏಕೆಂದರೆ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತದ ಮಹಿಳಾ ಕಾರ್ಮಿಕರಿಗಾಗಿ ಅನೇಕ ಕಾಯ್ದೆಗಳನ್ನು ರೂಪಿಸಿದ್ದಾರೆ. ಉದಾಹರಣೆಗೆ:

'ಗಣಿ ಮಹಿಳಾ ಕಾರ್ಮಿಕರ ಮಾತೃತ್ವ ಲಾಭ ಕಾಯ್ದೆ'

'ಮಹಿಳಾ ಕಾರ್ಮಿಕ ಕಲ್ಯಾಣ ನಿಧಿ'

'ಮಹಿಳಾ ಮತ್ತು ಬಾಲ ಕಾರ್ಮಿಕರ ರಕ್ಷಣಾ ಕಾಯ್ದೆ'

'ಮಹಿಳಾ ಕಾರ್ಮಿಕರಿಗೆ ಮಾತೃತ್ವ ಲಾಭ'

'ಕಲ್ಲಿದ್ದಲು ಗಣಿಗಳಲ್ಲಿ ಮಹಿಳೆಯರ ನೆಲದಡಿ ಕೆಲಸದ ನಿಷೇಧ'

ನಿಮ್ಮ ಕಂಪನಿಯು ನಿಮಗೆ ಆರೋಗ್ಯ ವಿಮೆ ನೀಡಿದ್ದರೆ ನೀವು ಸಂತೋಷವಾಗಿದ್ದರೆ, ಈ ಕೀರ್ತಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರದು. 'ಉದ್ಯೋಗಿಗಳ ರಾಜ್ಯ ವಿಮೆ (ESI)' ಕಾರ್ಮಿಕರಿಗೆ ವೈದ್ಯಕೀಯ ಸಹಾಯ, ರಜೆ, ಕೆಲಸದ ಸಮಯದಲ್ಲಿ ಸಂಭವಿಸಬಹುದಾದ ಅವಘಡಗಳಿಂದ ಉಂಟಾಗುವ ಅಂಗವೈಕಲ್ಯಕ್ಕೆ ಪರಿಹಾರ ಮತ್ತು ಇತರ ಸೌಲಭ್ಯಗಳನ್ನು ಒದಗಿಸುತ್ತದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಇದನ್ನು ಅನುಮೋದಿಸಿದ್ದರು. ಪೂರ್ವ ಏಷ್ಯಾದ ದೇಶಗಳಲ್ಲಿ ಉದ್ಯೋಗಿಗಳ ಕಲ್ಯಾಣಕ್ಕಾಗಿ ವಿಮಾ ಕಾಯ್ದೆಯನ್ನು ಜಾರಿಗೆ ತಂದ ಮೊದಲ ದೇಶ ಭಾರತ.

ಪ್ರತಿ ಬಾರಿ 'ತುಟ್ಟಿ ಭತ್ಯೆ' (D.A.) ಹೆಚ್ಚಾಗಿ ನಿಮ್ಮ ಮುಖದಲ್ಲಿ ನಗು ಬಂದಾಗ, ನೀವು ಡಾ. ಅಂಬೇಡ್ಕರ್ ಅವರಿಗೆ ಧನ್ಯವಾದ ಹೇಳಬೇಕು. ನಿಮಗೆ 'ರಜೆ ಲಾಭ' ಇದ್ದರೆ, ಡಾ. ಅಂಬೇಡ್ಕರ್ ಅವರಿಗೆ ನಮಸ್ಕರಿಸಿ. ವೇತನ ಶ್ರೇಣಿಯ ಪರಿಷ್ಕರಣೆ ('ಸ್ಕೇಲ್ ಆಫ್ ಪೇ ಪರಿಷ್ಕರಣೆ') ನಿಮ್ಮನ್ನು ಸಂತೋಷಪಡಿಸಿದರೆ, ಡಾ. ಅಂಬೇಡ್ಕರ್ ಅವರನ್ನು ನೆನಪಿಸಿಕೊಳ್ಳಿ.

ಡಾ. ಅಂಬೇಡ್ಕರ್ ಅವರ 'ಕೋಲ್ ಮತ್ತು ಮೈಕಾ ಗಣಿ ಪ್ರಾವಿಡೆಂಟ್ ಫಂಡ್' ಕೊಡುಗೆ ಅತ್ಯಂತ ಮಹತ್ವದ್ದು. ಆ ಸಮಯದಲ್ಲಿ, ಕಲ್ಲಿದ್ದಲು ಉದ್ಯೋಗವು ನಮ್ಮ ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಜನವರಿ 31, 1944 ರಲ್ಲಿ ಕಾರ್ಮಿಕರ ಹಿತಕ್ಕಾಗಿ 'ಕೋಲ್ ಮೈನ್ಸ್ ಸುರಕ್ಷತಾ ತಿದ್ದುಪಡಿ ಶಾಸನ' ಜಾರಿಗೆ ತಂದರು. ಏಪ್ರಿಲ್ 08, 1946 ರಲ್ಲಿ ಅವರು 'ಮೈಕಾ ಗಣಿ ಕಾರ್ಮಿಕ ಕಲ್ಯಾಣ ನಿಧಿ'ಯನ್ನು ಜಾರಿಗೆ ತಂದರು. ಇದು ಕಾರ್ಮಿಕರಿಗೆ ವಸತಿ, ನೀರು ಸರಬರಾಜು, ಶಿಕ್ಷಣ ಇತರ ಮೂಲಭೂತ ಸೌಕರ್ಯಗಳ ಜೊತೆಗೆ ಮನರಂಜನೆ ಮತ್ತು ಸಹಕಾರಿ ವ್ಯವಸ್ಥೆಗಳಲ್ಲಿ ಗಣನೀಯವಾದ ಸುಧಾರಣೆ ಮಾಡಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಬಿ.ಪಿ. ಅಗರ್ಕರ್ ಅವರ ಮಾರ್ಗದರ್ಶನದಲ್ಲಿ 'ಕಾರ್ಮಿಕ ಕಲ್ಯಾಣ ನಿಧಿ'ಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಬಗ್ಗೆ ಸಲಹೆ ನೀಡಲು ಸಲಹಾ ಸಮಿತಿಯನ್ನು ರಚಿಸಿದರು. ನಂತರ

ಇದನ್ನು ಜನವರಿ 1944 ರಲ್ಲಿ ಅನುಷ್ಠಾನಗೊಳಿಸಲಾಯಿತು.

ವೈಸ್ ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್ ಕಾರ್ಮಿಕ ಸದಸ್ಯರಾಗಿ, ಡಾ. ಅಂಬೇಡ್ಕರ್ ಅವರು ಕಾರ್ಮಿಕರ ಉತ್ಪಾದಕತೆಯನ್ನು ಹೆಚ್ಚಿಸಲು ಶಿಕ್ಷಣ ಮತ್ತು ಕೌಶಲ್ಯ ತರಬೇತಿ, ಆರೋಗ್ಯ ರಕ್ಷಣೆ ಮತ್ತು ಮಹಿಳಾ ಕಾರ್ಮಿಕರಿಗೆ ಮಾತೃತ್ವ ರಜೆ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ಪ್ರಾರಂಭಿಸಿದರು.

ಡಾ. ಅಂಬೇಡ್ಕರ್ ಅವರು 1942 ರಲ್ಲಿ 'ತ್ರಿಪಕ್ಷೀಯ ಕಾರ್ಮಿಕ ಮಂಡಳಿ'ಯನ್ನು ಸ್ಥಾಪಿಸುವಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಇದು ಕಾರ್ಮಿಕರ ಸಾಮಾಜಿಕ ಸುರಕ್ಷತೆಗೆ ಕಾವಲಾಗಿರುವುದರ ಜೊತೆಗೆ ಕಾರ್ಮಿಕರು ಮತ್ತು ಉದ್ಯೋಗದಾತರು ಸಮಾನ ಅವಕಾಶ ಪಡೆಯುವಂತೆ ಮಾಡಿತು. ಟ್ರೇಡ್ ಯೂನಿಯನ್ ಗಳು ಮತ್ತು ಕಾರ್ಮಿಕ ಸಂಘಟನೆಗಳನ್ನು ಬಲಪಡಿಸಲು ಕಡ್ಡಾಯ ಮಾನ್ಯತೆಯನ್ನು ಪರಿಚಯಿಸಿತು. ಇಂದಿಗೂ, ಕೈಗಾರಿಕಾ ವಿವಾದಗಳನ್ನು ಪರಿಹರಿಸಲು ಡಾ. ಅಂಬೇಡ್ಕರ್ ಸೂಚಿಸಿದ 'ಟ್ರಿಬ್ಯೂನಲ್ ವ್ಯವಸ್ಥೆ' (ಕಾರ್ಮಿಕರು, ಉದ್ಯೋಗದಾತರು ಮತ್ತು ಸರ್ಕಾರಿ ಪ್ರತಿನಿಧಿಗಳು) ಭಾರತದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. (ಆದರೆ, ಪ್ರಸ್ತುತ ಸರ್ಕಾರಗಳು ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿಲ್ಲ ಎಂಬುದು ವಾಸ್ತವ)

ಡಾ. ಅಂಬೇಡ್ಕರ್ ಅವರು ವಿದ್ಯುತ್ ಕ್ಷೇತ್ರದಲ್ಲಿ 'ಎಲೆಕ್ಟ್ರಿಕಲ್ ಗ್ರಿಡ್' ಅಂದರೆ ಉತ್ಪಾದಕರಿಂದ ಗ್ರಾಹಕರಿಗೆ ಪರಸ್ಪರ ಸಂಬಂಧ ಹೊಂದಿರುವ ವಿದ್ಯುತ್ ವಿತರಣಾ ಜಾಲದ ಅಗತ್ಯವನ್ನು ಒತ್ತಿ ಹೇಳಿದರು. ಇದು ಇಂದಿಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇಂದು ವಿದ್ಯುತ್ ಎಂಜಿನಿಯರ್ ಗಳು ವಿದೇಶಗಳಲ್ಲಿ ತರಬೇತಿ ಪಡೆಯುತ್ತಿದ್ದರೆ, ಈ ಯೋಜನೆಯ ರೂವಾರಿ ಡಾ. ಅಂಬೇಡ್ಕರ್. ಕಾರ್ಮಿಕ ಇಲಾಖೆಯ ಸಚಿವರಾಗಿ ಅವರು ಉತ್ತಮ ಎಂಜಿನಿಯರ್ ಗಳನ್ನು ವಿದೇಶಗಳಲ್ಲಿ ತರಬೇತಿ ಪಡೆಯುವ ನೀತಿಯನ್ನು ರೂಪಿಸಿದರು. ಭಾರತದ ನೀರಾವರಿ ಅಭಿವೃದ್ಧಿ ಮತ್ತು ವಿದ್ಯುತ್ ಯೋಜನೆಯಲ್ಲಿ ಡಾ. ಅಂಬೇಡ್ಕರ್ ಅವರು ನಿರ್ವಹಿಸಿದ ಪಾತ್ರಕ್ಕೆ ಯಾರೂ ಕೃತಜ್ಞತೆ ತೋರಿಸದಿರುವುದು ವಿಷಾದನೀಯ.

ಕಾರ್ಮಿಕ ಖಾತೆಯನ್ನು 'ಸಮವರ್ತಿ ಪಟ್ಟಿ'ಯಲ್ಲಿ ಸೇರಿಸಲಾಗಿದೆ. ಕಾರ್ಮಿಕರ ಹಿತರಕ್ಷಣೆಗಾಗಿ 'ಚೀಫ್ ಮತ್ತು ಲೇಬರ್ ಕಮಿಷನರ್' ಗಳನ್ನು ನೇಮಿಸಲಾಯಿತು, 'ಲೇಬರ್ ತನಿಖಾ ಸಮಿತಿ' ರಚನೆಯಾಯಿತು – ಇವೆಲ್ಲದರ ಕೀರ್ತಿ ಡಾ. ಅಂಬೇಡ್ಕರ್ ಅವರದು. 'ಕನಿಷ್ಠ ವೇತನ ಕಾಯ್ದೆ' ಡಾ. ಅಂಬೇಡ್ಕರ್ ಅವರ ಕೊಡುಗೆಯಾಗಿತ್ತು. ಅದೇ ರೀತಿ 'ಮಾತೃತ್ವ ಲಾಭ ಶಾಸನ' ಮಹಿಳಾ ಕಾರ್ಮಿಕರನ್ನು ಸಬಲೀಕರಿಸಿತು. ಇಂದು ಭಾರತದಲ್ಲಿ 'ಉದ್ಯೋಗ ವಿನಿಮಯ ಕೇಂದ್ರಗಳು' ಇದ್ದರೆ, ಅದು ಡಾ.

ಅಂಬೇಡ್ಕರ್ ಅವರ ದೂರದರ್ಶಿ ಆಲೋಚನೆಯ ಫಲ. ಕಾರ್ಮಿಕರು ತಮ್ಮ ಸಮಾನ ನ್ಯಾಯಯುತ ಹಕ್ಕುಗಳಿಗಾಗಿ ಮುಷ್ಕರ ಹೂಡಬಹುದಾದರೆ ಅದಕ್ಕೂ ಅವರು ಕಾರಣ. ಡಾ. ಅಂಬೇಡ್ಕರ್ ಅವರು ಕಾರ್ಮಿಕರು 'ಮುಷ್ಕರ ಮಾಡುವ ಹಕ್ಕನ್ನು' ಅಗತ್ಯವಾಗಿ ಗುರುತಿಸಿದ್ದರು. ನವೆಂಬರ್ 08, 1943 ರಂದು ಡಾ. ಅಂಬೇಡ್ಕರ್ 'ಇಂಡಿಯನ್ ಟ್ರೇಡ್ ಯೂನಿಯನ್ಸ್ (ತಿದ್ದುಪಡಿ) ಶಾಸನ'ವನ್ನು ಟ್ರೇಡ್ ಯೂನಿಯನ್ ಗಳ ಕಡ್ಡಾಯ ಮಾನ್ಯತೆಗಾಗಿ ಜಾರಿಗೆ ತಂದರು. ಡಾ. ಅಂಬೇಡ್ಕರ್ ಅವರು ದಲಿತ ವರ್ಗವು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಪರಿಭಾವಿಸಿದ್ದರು. ಕಾರ್ಮಿಕರ ಹಿತರಕ್ಷಣೆಯ ಹೋರಾಟಗಳಲ್ಲಿ ತನ್ನ ಜೊತೆಗೆ ಇರುತ್ತಿದ್ದ ಜಿ.ಆರ್. ಪ್ರಧಾನ್ ಅವರ 'ಅನ್ ಟಚಬಲ್ ವರ್ಕರ್ಸ್ ಆಫ್ ಬಾಂಬೆ ಸಿಟಿ' ಎಂಬ ಪ್ರಕಟಿತ ಪಿಹೆಚ್.ಡಿ. ಸಂಶೋಧನಾ ಪ್ರಬಂಧಕ್ಕೆ ಮುನ್ನುಡಿಯನ್ನು ಬರೆದಿದ್ದರು.

ನಿಸ್ಸಂದೇಹವಾಗಿ ಹೇಳಬಹುದು, ಭಾರತದ ಕಾರ್ಮಿಕರಿಗೆ ಹಕ್ಕುಗಳು ಇದ್ದರೆ, ಅದು ಡಾ. ಅಂಬೇಡ್ಕರ್ ಅವರ ಕಠಿಣ ಪರಿಶ್ರಮ ಮತ್ತು ನಮಗಾಗಿ ಅವರು ನಡೆಸಿದ ಹೋರಾಟದ ಫಲ. ಕಾರ್ಮಿಕರಾಗಿ ನಾವು ಹೊಂದಿರುವ ಎಲ್ಲಾ ಹಕ್ಕುಗಳು ಮತ್ತು ಸೌಲಭ್ಯಗಳಿಗಾಗಿ ಡಾ. ಅಂಬೇಡ್ಕರ್ ಅವರಿಗೆ ಋಣಿ. ಹೀಗಾಗಿ, ಭಾರತದಲ್ಲಿ ಕಾರ್ಮಿಕ ದಿನಾಚರಣೆಯನ್ನು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಪಾರ ಕೊಡುಗೆಯನ್ನು ಕಡೆಗಣಿಸಿ ಆಚರಿಸುವುದನ್ನು ವಿರೋಧಿಸೋಣ. ಭಾರತ ಕಂಡ ಅತ್ಯುತ್ತಮ ಕಾರ್ಮಿಕ ಮಂತ್ರಿಯನ್ನು ಕೃತಜ್ಞತೆಯಿಂದ ಸ್ಮರಿಸೋಣ.

**ಜೈ ಭೀಮ್**

**ಪರಾಮರ್ಶನ ಗ್ರಂಥಗಳು:**

1. ಸುಮಾ ಬಿ. ಯು. (ಸಂ), (2015), ಬಿ. ಆರ್. ಅಂಬೇಡ್ಕರ್: ವರ್ತಮಾನದೊಂದಿಗೆ ಮುಖಾಮುಖಿ, ಲಡಾಯಿ ಪ್ರಕಾಶನ, ಗದಗ.
2. ಅನುಪಮಾ ಎಚ್. ಎಸ್. , (2018), ವಿಮೋಚಕನ ಹೆಜ್ಜೆಗಳು: ಡಾ. ಬಿ.ಆರ್. ಅಂಬೇಡ್ಕರ್ ಬದುಕು–ಸಾಧನೆ, ಲಡಾಯಿ ಪ್ರಕಾಶನ, ಗದಗ.
3. ಅಪ್ಪಗೆರೆ ಸೋಮಶೇಖರ್, (2023), ಮಾನವತೆಯ ಮಾರ್ಗದಾತ: ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಬದುಕು ಮತ್ತು ಹೋರಾಟದ ಚಿಂತನ ಕಥನ, ಚಿಂತನ ಚಿತ್ತಾರ, ಮೈಸೂರು.
4. Anand Teltumbde, (2024), Iconoclast: A Reflective Biography of Dr. Babasaheb Ambedkar, Penguin Random House, India.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.